# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

**ಬೆಂಗಳೂರು – 560 001**

**ಅಧಿಸೂಚನೆ ಸಂಖ್ಯೆ: ವೈ/01/15/1368, ದಿನಾಂಕ: 16.11.2015**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) (ಮೂರನೇ ತಿದ್ದುಪಡಿ) ವಿನಿಯಮಗಳು, 2015.

ಪೀಠಿಕೆ ಆಯೋಗವು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ವಿನಿಯಮಗಳು, 2011ನ್ನು (ಮೂಲ ವಿನಿಯಮಗಳು ಎಂದು ಕರೆಯಲಾಗುತ್ತದೆ) ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ, ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 181(3)ರ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಹಿತಾಸಕ್ತಿದಾರರಿಂದ ಅನಿಸಿಕೆಗಳನ್ನು, ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, ಅಂಥ ತಿದ್ದುಪಡಿ ವಿನಿಯಮಗಳ ಕರಡನ್ನು ಪ್ರಕಟಿಸಿತ್ತು. ಆಯೋಗವು ದಿನಾಂಕ: 09.09.2015ರಂದು ಈ ವಿಷಯವಾಗಿ ಸಾರ್ವಜನಿಕ ಅಹವಾಲನ್ನು ಸಹ ನಡೆಸಿತ್ತು. ಈ ವಿಷಯವಾಗಿ ಹಿತಾಸಕ್ತಿದಾರರಿಂದ ಸ್ವೀಕರಿಸಿದ ಅನಿಸಿಕೆಗಳು / ಅಭಿಪ್ರಾಯಗಳು / ಸಲಹೆಗಳನ್ನು ಪರಿಗಣಿಸಿದ ತರುವಾಯ, ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ, 2003ರ (2003ರ ಕೇಂದ್ರ ಅಧಿನಿಯಮ 36) ಪರಿಚ್ಛೇದ 86(1)ರ ಕಲಮು (ಇ) ಜೊತೆಗೆ ಓದಿಕೊಳ್ಳಲಾದ ಪರಿಚ್ಛೇದ 181ರ ಅಡಿಯಲ್ಲಿ ಮತ್ತು ಈ ಸಂಬಂಧದಲ್ಲಿ ಅದಕ್ಕೆ ಪ್ರದತ್ತವಾದ ಇತರ ಎಲ್ಲ ಅಧಿಕಾರಗಳ ಪ್ರಕಾರ, ಈ ಮೂಲಕ ವಿನಿಯಮಗಳನ್ನು ರೂಪಿಸಿದೆ, ಎಂದರೆ,–

1. **ಸಂಕ್ಷಿಪ್ತ ಶೀರ್ಷಿಕೆ, ಅನ್ವಯಿಸುವಿಕೆ ಮತ್ತು ಪ್ರಾರಂಭ.–**

   (i) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) (ಮೂರನೇ ತಿದ್ದುಪಡಿ) ವಿನಿಯಮಗಳು, 2015 ಎಂದು ಕರೆಯತಕ್ಕದ್ದು.

   (ii) ಈ ವಿನಿಯಮಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತವೆ.

   (iii) ಈ ವಿನಿಯಮಗಳು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತವೆ.

2. ಪ್ರಸ್ತುತ ಜಾರಿಯಲ್ಲಿರುವ ವಿನಿಯಮಗಳಲ್ಲಿ, ಅಂಕಣ (1)ರಲ್ಲಿ ಸೂಚಿಸಿದ ಸಂಖ್ಯೆಗಳ ಖಂಡಗಳಲ್ಲಿ, ಕೆಳಗಿನ ಕೋಷ್ಟಕದ ಅಂಕಣ (2)ರಲ್ಲಿ ಕೊಟ್ಟಿರುವ, ಈಗ ಇರುವ ವಿನಿಯಮಗಳ ಬದಲಾಗಿ ಅಂಕಣ (3)ರಲ್ಲಿ ಸೂಚಿಸಿದಂತಹ ವಿನಿಯಮಗಳನ್ನು ಪ್ರತಿ ಸ್ಥಾಪಿಸತಕ್ಕದ್ದು:

| ಅಂಕಣ (1) ಕಲಮು ಸಂಖ್ಯೆ | ಅಂಕಣ (2) ಪ್ರಸ್ತುತ ಜಾರಿಯಲ್ಲಿರುವ ವಿನಿಯಮಗಳು | ಅಂಕಣ (3) ತಿದ್ದುಪಡಿಯಾದ ವಿನಿಯಮಗಳು |
|---|---|---|
| 2(ಡಿಡಿ) | -- | "ಒಪ್ಪಂದದ ಬೇಡಿಕೆ" ಎಂದರೆ, ವಿದ್ಯುಚ್ಛಕ್ತಿ ಪೂರೈಕೆ ಒಪ್ಪಂದದಲ್ಲಿ ವಿತರಣಾ ಲೈಸೆನ್ಸುದಾರ ಮತ್ತು ಗ್ರಾಹಕರ ನಡುವೆ ಪರಸ್ಪರ ಒಪ್ಪಿಕೊಂಡ ಮೆಗಾವಾಟ್‌ನಲ್ಲಿ ವ್ಯಕ್ತಪಡಿಸಿದ ಲೋಡ್. |
| 3(ii) | ನವೀಕರಿಸಬಹುದಾದ ಮೂಲಗಳಿಂದ ಹೊರತುಪಡಿಸಿ ಬೇರೆ ಮೂಲಗಳಿಂದ ವಿದ್ಯುತ್ ಉತ್ಪಾದಿಸುವ ಗ್ರಿಡ್ ಜಾಲದ ಸಂಪರ್ಕವಿರುವ ಹಾಗೂ 5-ಮೆಗಾ ವಾಟ್‌ಗಿಂತ ಹೆಚ್ಚಿನ ಒಟ್ಟು ಸಾಮರ್ಥ್ಯವನ್ನು ಹೊಂದಿರುವ ಕ್ಯಾಪ್ಟೀವ್ ಸ್ಥಾವರ ಅಥವಾ ಸ್ಥಾವರಗಳಿಂದ ವಿದ್ಯುತ್ತನ್ನು ಪಡೆಯುತ್ತಿರುವ ಯಾವುದೇ ವ್ಯಕ್ತಿ ಮತ್ತು | ಕರ್ನಾಟಕ ರಾಜ್ಯದ ಒಳಗೆ 5 ಮೆಗಾ ವಾಟ್‌ಗಿಂತ ಹೆಚ್ಚಿನ ಸ್ಥಾಪಿಸಿದ ಸಾಮರ್ಥ್ಯವನ್ನು ಹೊಂದಿರುವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳನ್ನು ಹೊರತುಪಡಿಸಿ, ಇತರ ಇಂಧನ ಮೂಲಗಳನ್ನು ಬಳಸಿ ವಿದ್ಯುಚ್ಛಕ್ತಿ ಉತ್ಪಾದಿಸುತ್ತಿರುವ, ಸಂಯುಕ್ತ ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರ(ಗಳು) ಅನ್ನು ಒಳಗೊಂಡಂತೆ, ಗ್ರಿಡ್ ಜಾಲಕ್ಕೆ ಸಂಪರ್ಕಗೊಂಡ ಕ್ಯಾಪ್ಟೀವ್ ಸ್ಥಾವರ ಅಥವಾ ಸ್ಥಾವರಗಳಿಂದ ಉತ್ಪಾದಿಸಲಾದ ವಿದ್ಯುತ್ತನ್ನು ಪಡೆಯುತ್ತಿರುವ ಯಾವುದೇ ಕ್ಯಾಪ್ಟೀವ್ ಗ್ರಾಹಕ; ಮತ್ತು |
| 3(iii) | 5 ಮೆಗಾ ವಾಟ್‌ಗಿಂತ ಅಧಿಕ ಒಪ್ಪಂದಿತ ವಿದ್ಯುತ್ ಹೊರೆಯನ್ನು ಹೊಂದಿದ್ದು, ನವೀಕರಿಸಬಹುದಾದ ಇಂಧನ ಮೂಲಗಲನ್ನು ಹೊರತುಪಡಿಸಿ, ಮುಕ್ತ ಮೂಲಗಳಿಂದ ವಿದ್ಯುತ್ ಖರೀದಿಸುವ ಯಾವುದೇ ವ್ಯಕ್ತಿ. | (ಎ) ವಿತರಣ ಲೈಸನ್ಸುದಾರನೊಡನೆ ಐದು ಮೆಗಾ ವಾಟ್‌ಗಿಂತ ಅಧಿಕ ಪ್ರಮಾಣದಲ್ಲಿ ಒಪ್ಪಂದದ ಬೇಡಿಕೆಯನ್ನು ಹೊಂದಿರುವ ಮತ್ತು ಮುಕ್ತ ಅವಕಾಶದ ಮೂಲಕ ಒಂದು ಮೆಗಾ ವಾಟ್ ಮೀರಿದ ವಿದ್ಯುತ್ತನ್ನು, ನವೀಕರಿಸಬಹುದಾದ ಇಂಧನ ಮೂಲಗಳನ್ನು ಹೊರತುಪಡಿಸಿ ಇತರ ಇಂಧನ ಮೂಲಗಳನ್ನು ಬಳಸಿಕೊಂಡು ವಿದ್ಯುತ್ತನ್ನು ಉತ್ಪಾದಿಸುತ್ತಿರುವ, ಸಂಯುಕ್ತ-ವಿದ್ಯುತ್ ಉತ್ಪಾದನಾ ಸ್ಥಾವರ(ಗಳು) ಅನ್ನು ಒಳಗೊಂಡಂತೆ, ವಿದ್ಯುತ್ ಸ್ಥಾವರಗಳಿಂದ ವಿದ್ಯುತ್ತನ್ನು ಖರೀದಿಸುತ್ತಿರುವ ಅಥವಾ ವಿದ್ಯುಚ್ಛಕ್ತಿ ವಿನಿಮಯ ಕೇಂದ್ರದ ಮೂಲಕ ಒಂದು ಮೆಗಾ ವಾಟ್ ಮೀರಿದ ವಿದ್ಯುತ್ತನ್ನು ಖರೀದಿಸುತ್ತಿರುವ ಯಾವುದೇ ವ್ಯಕ್ತಿ;<br><br>**ವಿವರಣೆ:** ವಿನಿಮಯ ಕೇಂದ್ರದ ಮೂಲಕ ಪಡೆದಂಥ ವಿದ್ಯುಚ್ಛಕ್ತಿಯು ಒಟ್ಟುಗೂಡಿದ್ದಾಗುವುದರಿಂದ, ಅಂತಹ ವಿದ್ಯುಚ್ಛಕ್ತಿಯನ್ನು ನವೀಕರಿಸಲಾಗದ ಇಂಧನ ಮೂಲದ್ದು ಎಂದು ಪರಿಗಣಿಸಲಾಗುತ್ತದೆ.<br><br>(ಬಿ) ವಿತರಣಾ ಲೈಸೆನ್ಸುದಾರನೊಂದಿಗೆ, ವಿದ್ಯುಚ್ಛಕ್ತಿ |

<table>
<tr>
<td></td>
<td></td>
<td>ಪೂರೈಕೆಗಾಗಿ ಯಾವುದೇ ಒಪ್ಪಂದವನ್ನು ಮಾಡಿಕೊಂಡಿರದ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳನ್ನು ಹೊರತುಪಡಿಸಿ, ಇತರ ಇಂಧನ ಮೂಲಗಳನ್ನು ಬಳಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ, ಸಂಯುಕ್ತ ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಾವರವನ್ನು(ಗಳನ್ನು) ಒಳಗೊಂಡಂತೆ, ವಿದ್ಯುತ್ ಉತ್ಪಾದನಾ ಸ್ಥಾವರದಿಂದ(ಗಳಿಂದ) ಮುಕ್ತ ಅವಕಾಶದ ಮೂಲಕ ಒಂದು ಮೆಗಾ ವಾಟ್‌ಗೆ ಮೀರಿದ ವಿದ್ಯುಚ್ಛಕ್ತಿಯನ್ನು ಖರೀದಿಸುತ್ತಿರುವ ಅಥವಾ ವಿದ್ಯುಚ್ಛಕ್ತಿ ವಿನಿಮಯ ಕೇಂದ್ರದ ಮೂಲಕ ಒಂದು ಮೆಗಾ ವಾಟ್‌ಗೆ ಮೀರಿದ ವಿದ್ಯುಚ್ಛಕ್ತಿಯನ್ನು ಖರೀದಿಸುತ್ತಿರುವ ಯಾವುದೇ ವ್ಯಕ್ತಿ;</td>
</tr>
<tr>
<td>4(i)</td>
<td>ಪ್ರತಿಯೊಬ್ಬ ವಿತರಣ ಲೈಸೆನ್ಸುದಾರರು, ತಾವು ವರ್ಷವೊಂದರಲ್ಲಿ ಪಡೆಯುವ ಒಟ್ಟು ವಿದ್ಯುತ್ ಪ್ರಮಾಣಕ್ಕೆ ಅನುಗುಣವಾಗಿ ನವೀಕರಿಸಬಹುದಾದ ವಿದ್ಯುತ್ ಮೂಲಗಳಿಂದ ಕನಿಷ್ಟ ಕೆಳಗೆ ತಿಳಿಸಿರುವ ಪ್ರಮಾಣದಲ್ಲಿ ವಿದ್ಯುತ್ ಖರೀದಿಸತಕ್ಕದ್ದು:
<table>
<tr><th>ವಿ.ಸಕಂಪನಿ</th><th>ಸೌರಶಕ್ತಿಯನ್ನು ಹೊರತುಪಡಿಸಿ ನವೀಕರಿಸಬಹುದಾದ ಇಂಧನ ಮೂಲಗಳಿಂದ ಪಡೆಯಬೇಕಾದ ವಿದ್ಯುತ್ ಪ್ರಮಾಣ</th><th>ಸೌರಶಕ್ತಿ ವಿದ್ಯುತ್ ಖರೀದಿ ಹೊಣೆಗಾರಿಕೆ</th></tr>
<tr><td>ಬೆವಿಕಂಪನಿ</td><td>10%</td><td>0.25%</td></tr>
<tr><td>ಮವಿಕಂಪನಿ</td><td>10%</td><td>0.25%</td></tr>
<tr><td>ಸೆಸ್ಕ್</td><td>10%</td><td>0.25%</td></tr>
<tr><td>ಹುವಿಕಂಪನಿ</td><td>7%</td><td>0.25%</td></tr>
<tr><td>ಗುವಿಕಂಪನಿ</td><td>7%</td><td>0.25%</td></tr>
<tr><td>ಹುಕ್ಕೇರಿ ಸೊಸೈಟಿ</td><td>7%</td><td>0.25%</td></tr>
</table>
</td>
<td>ಪ್ರತಿಯೊಬ್ಬ ವಿತರಣಾ ಲೈಸೆನ್ಸುದಾರರು, ಆರ್ಥಿಕ ವರ್ಷಾವಧಿಯಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ, ತಾನು ಒಟ್ಟಾರೆ ಪಡೆಯುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಲಾದ ಶೇಕಡಾವಾರು ಪ್ರಮಾಣದಂತೆ ಉತ್ಪಾದಿಸಿದ ವಿದ್ಯುಚ್ಛಕ್ತಿಯನ್ನು ಖರೀದಿಸಬೇಕು:<br>
(ಎ) ಸೌರ ಶಕ್ತಿಯಲ್ಲದ ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಖರೀದಿ ಭಾಧ್ಯತೆ (ನಾನ್ ಸೋಲಾರ್ ಆರ್.ಪಿ.ಓ)
<table>
<tr><th></th><th colspan="5">ವರ್ಷವಾರು</th></tr>
<tr><th>ವಿತರಣಾ ಲೈಸೆನ್ಸುದಾರ</th><th>2015 – 16</th><th>2016 – 17</th><th>2017 –18</th><th>2018 –19</th><th>2019 – 20 ಮತ್ತು ನಂತರ</th></tr>
<tr><td>ಬೆವಿಸಕಂ</td><td>10%</td><td>11%</td><td>12%</td><td>13%</td><td>14%</td></tr>
<tr><td>ಮವಿಸಕಂ</td><td>10%</td><td>11%</td><td>12%</td><td>13%</td><td>14%</td></tr>
<tr><td>ಚಾವಿಸಕಂ</td><td>10%</td><td>11%</td><td>12%</td><td>13%</td><td>14%</td></tr>
<tr><td>ಹುವಿಸಕಂ</td><td>7%</td><td>7.5%</td><td>8.5%</td><td>9.5%</td><td>10.5%</td></tr>
<tr><td>ಗುವಿಸಕಂ</td><td>5.0%</td><td>5.50%</td><td>6.0%</td><td>7.0%</td><td>8%</td></tr>
<tr><td>ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ</td><td>7%</td><td>7.5%</td><td>8.5%</td><td>9.5%</td><td>10.5%</td></tr>
<tr><td>ಭಾವಿತ ಲೈಸೆನ್ಸುದಾರ (ಲೈಸೆನ್ಸು ದಾರರು)</td><td colspan="5">ವಿಶೇಷ ಆರ್ಥಿಕ ವಲಯದ ಆರ್‌ಪಿಓ ಗುರಿಯು, ಅದು ಯಾವ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಇದೆಯೋ, ಆ ಕಂಪನಿಗೆ ನಿಗದಿಪಡಿಸಿದಂತೆಯೇ ಇರತಕ್ಕದ್ದು.</td></tr>
</table>
</td>
</tr>
</table>

(ಬಿ) ಸೌರಶಕ್ತಿ ವಿದ್ಯುತ್ ಖರೀದಿ ಭಾಧ್ಯತೆ (ಸೋಲಾರ್ ಆರ್.ಪಿ.ಓ)

| | ವರ್ಷವಾರು | | | | |
|---|---|---|---|---|---|
| ವಿತರಣ ಲೈಸೆನ್ಸು ದಾರ | 2015 – 16 | 2016 – 17 | 2017 –18 | 2018 –19 | 2019 – 20 ಮತ್ತು ನಂತರ |
| ಬೆವಿಸಕಂ | 0.25% | 0.75% | 1.25% | 1.75% | 2.50% |
| ಮವಿಸಕಂ | 0.25% | 0.75% | 1.25% | 1.75% | 2.50% |
| ಚಾವಿಸಕಂ | 0.25% | 0.75% | 1.25% | 1.75% | 2.50% |
| ಹುವಿಸಕಂ | 0.25% | 0.75% | 1.25% | 1.75% | 2.50% |
| ಗುವಿಸಕಂ | 0.25% | 0.75% | 1.25% | 1.75% | 2.50% |
| ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ | 0.25% | 0.75% | 1.25% | 1.75% | 2.50% |
| ಭಾವಿತ ಲೈಸೆನ್ಸುದಾರ (ಲೈಸೆನ್ಸು ದಾರರು) | 0% | 0.75% | 1.25% | 1.75% | 2.50% |

ಪರಂತು, ವಿದ್ಯುತ್ ಸರಬರಾಜು ಕಂಪನಿ(ಗಳು) ಆರ್‌ಪಿಒ ಪಾಲಿಸಿದ್ದರೆ, ದೊಡ್ಡ ಪ್ರಮಾಣದಲ್ಲಿ ಅಂತಹ ವಿದ್ಯುತ್ ಸರಬರಾಜು ಕಂಪನಿಯಿಂದ (ಗಳಿಂದ) ಭಾಗಶಃವಾಗಿ ಅಥವಾ ಸಂಪೂರ್ಣವಾಗಿ ವಿದ್ಯುತ್ ಖರೀದಿಸುವ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ (ಹೆಚ್‌ಆರ್‌ಇಸಿಎಸ್) ಮತ್ತು ಭಾವಿತ ಲೈಸೆನ್ಸುದಾರ(ದಾರರು), ಅಂಥ ವಿದ್ಯುತ್ ಸರಬರಾಜು ಕಂಪನಿಯಿಂದ ವಿದ್ಯುತ್ ಖರೀದಿಸಿದ ಮಟ್ಟಿಗೆ ಆರ್‌ಪಿಒ ಪಾಲಿಸಿದ್ದಾರೆಂದು ಭಾವಿಸತಕ್ಕದ್ದು. ಅಂಥ ಸಂದರ್ಭಗಳಲ್ಲಿ, ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಯು(ಗಳು), ಸಂದರ್ಭಾನುಸಾರ, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘಕ್ಕೆ (ಹೆಚ್‌ಆರ್‌ಇಸಿಎಸ್) ಅಥವಾ ಅಂಥ ಭಾವಿತ ಲೈಸೆನ್ಸುದಾನಿಗೆ(ದಾರರಿಗೆ) ಆರ್.ಪಿ.ಓವನ್ನು ಪಾಲಿಸಿರುವ ಬಗ್ಗೆ ತ್ರೈಮಾಸಿಕ ಅನುಪಾಲನೆಯ ವರದಿಯನ್ನು ಒದಗಿಸತಕ್ಕದ್ದು.

ಹಾಗೂ ಪರಂತು, ವಿದ್ಯುತ್ ಸರಬರಾಜು ಕಂಪನಿ(ಗಳು) ಆರ್.ಪಿ.ಓ ಪಾಲಿಸಿರದಿದ್ದರೆ, ದೊಡ್ಡ ಪ್ರಮಾಣದಲ್ಲಿ ಅಂತಹ ವಿದ್ಯುತ್ ಸರಬರಾಜು ಕಂಪನಿಯಿಂದ(ಗಳಿಂದ) ಭಾಗಶಃವಾಗಿ ಅಥವಾ ಸಂಪೂರ್ಣವಾಗಿ ವಿದ್ಯುತ್ ಖರೀದಿಸುವ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘ

<table>
<tr>
<td></td>
<td></td>
<td>(ಹೆಚ್‌ಆರ್‌ಇಸಿಎಸ್) ಮತ್ತು ಭಾವಿತ ಲೈಸೆನ್ಸುದಾರ (ದಾರರು), ಅಂಥ ಖರೀದಿಯಷ್ಟರ ಮಟ್ಟಿಗೆ ಆರ್.ಪಿ.ಓ ಪಾಲಿಸಿಲ್ಲವೆಂದು ಭಾವಿಸತಕ್ಕದ್ದು. ಸಂದರ್ಭಾನುಸಾರ, ಅಂಥ ಸಂದರ್ಭಗಳಲ್ಲಿ ಆರ್.ಪಿ.ಓವನ್ನು ಪಾಲಿಸುವುದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ (ಹೆಚ್‌ಆರ್‌ಇಸಿಎಸ್) ಅಥವಾ ಅಂಥ ಭಾವಿತ ಲೈಸೆನ್ಸುದಾನ(ದಾರರ) ಹೊಣೆಗಾರಿಕೆಯಾಗಿರುತ್ತದೆ.<br><br>ಮತ್ತೂ ಅಲ್ಲದೆ, ಒಂದು ವರ್ಷದಲ್ಲಿ ನಿರ್ದಿಷ್ಟಪಡಿಸಿದ ಸೌರ ಶಕ್ತಿ ಆರ್.ಪಿ.ಓ ಮೀರಿ ಖರೀದಿಸಿದ ಹೆಚ್ಚಿನ ಸೌರಶಕ್ತಿ ವಿದ್ಯುಚ್ಛಕ್ತಿಯನ್ನು, ಆ ವರ್ಷದಲ್ಲಿ ಸೌರಶಕ್ತಿಯೇತರ ಆರ್.ಪಿ.ಓದಲ್ಲಿ ಕೊರತೆಯಿದ್ದರೆ, ಅದಕ್ಕೆ ಪ್ರತಿಯಾಗಿ ಸರಿಹೊಂದಿಸುವುದಕ್ಕೆ ಅನುಮತಿಸಲಾಗತಕ್ಕದ್ದು.</td>
</tr>
<tr>
<td>4(ii)</td>
<td>ಮೇಲಿನ ಕಲಮು 3(ii)ರಲ್ಲಿ ತಿಳಿಸಿರುವಂತೆ, ಗ್ರಿಡ್ ಜಾಲಕ್ಕೆ ಸಂಪರ್ಕಗೊಂಡ ಪ್ರತಿಯೊಬ್ಬ ಕ್ಯಾಪ್ಟಿವ್ ವಿದ್ಯುತ್ ಗ್ರಾಹಕನು, ಕ್ಯಾಪ್ಟಿವ್ ಮೂಲಗಳಿಂದ ತಾನು ಬಳಸುವ ಒಟ್ಟಾರೆ ವಿದ್ಯುತ್ ಪ್ರಮಾಣದ ಶೇಕಡಾ 5ರಷ್ಟು ವಿದ್ಯುತ್ತನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.</td>
<td>ಮೇಲಿನ ಖಂಡ 3(ii)ರಲ್ಲಿ ನಮೂದಿಸಿದ, ಗ್ರಿಡ್ ಜಾಲಕ್ಕೆ ಸಂಪರ್ಕಗೊಂಡ ಪ್ರತಿಯೊಬ್ಬ ಕ್ಯಾಪ್ಟೀವ್ ವಿದ್ಯುತ್ ಗ್ರಾಹಕನು, ಯಾವುದೇ ಹಣಕಾಸು ವರ್ಷಾವಧಿಯಲ್ಲಿ ಕ್ಯಾಪ್ಟೀವ್ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್ ಪ್ರಮಾಣದಲ್ಲಿ ಕನಿಷ್ಟ ಈ ಕೆಳಗೆ ನಿರ್ದಿಷ್ಟಪಡಿಸಲಾದ ಶೇಕಡಾವಾರು ಪ್ರಮಾಣದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸತಕ್ಕದ್ದು:<br><br>
<table>
<tr><th>ಮೂಲ</th><th>2015 – 16</th><th>2016 – 17</th><th>2017 – 18</th><th>2018 – 19</th><th>2019 – 20 ಮತ್ತು ನಂತರ</th></tr>
<tr><td>ಸೌರಶಕ್ತಿ ಅಲ್ಲದ ಮೂಲ ಗಳಿಂದ</td><td>5.0%</td><td>5.5%</td><td>6%</td><td>7.0%</td><td>8%</td></tr>
<tr><td>ಸೌರಶಕ್ತಿ ಮೂಲ ಗಳಿಂದ</td><td>0%</td><td>0.75%</td><td>1.25%</td><td>1.75%</td><td>2.50%</td></tr>
</table>
<br>ಪರಂತು, ಗ್ರಾಹಕನ ಉದ್ಯಮವು ಒಂದೇ ಕಾನೂನುಸಮ್ಮತ ಸಂಸ್ಥೆಯಾಗಿದ್ದು, ಅದು ಕರ್ನಾಟಕ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಘಟಕಗಳನ್ನು ಹೊಂದಿದ್ದರೆ, ಕರ್ನಾಟಕ ರಾಜ್ಯದೊಳಗಿನ ಎಲ್ಲ ಅಂಥ ಘಟಕಗಳ ಸಂಯೋಜಿತ ಆರ್.ಪಿ.ಓವನ್ನು ಮೇಲೆ ನಿರ್ದಿಷ್ಟಪಡಿಸಿದ ಆರ್.ಪಿ.ಓವನ್ನು ಪಾಲಿಸುವ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.</td>
</tr>
</table>

<table>
<tr><td></td><td></td><td></td></tr>
<tr><td>4(iii)</td><td>ಮೇಲಿನ ಕಲಮು 3(iii)ರಲ್ಲಿ ತಿಳಿಸಿರುವಂತೆ, ಪ್ರತಿಯೊಬ್ಬ ಮುಕ್ತ ಮಾರುಕಟ್ಟೆ ಮೂಲ ವಿದ್ಯುತ್ ಗ್ರಾಹಕನು, ಮುಕ್ತ ಮಾರುಕಟ್ಟೆ ಮೂಲಗಳಿಂದ ತಾನು ಬಳಸುವ ಒಟ್ಟಾರೆ ವಿದ್ಯುತ್ ಪ್ರಮಾಣದ ಶೇಕಡಾ 5ರಷ್ಟು ವಿದ್ಯುತ್ತನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.</td><td>ಮೇಲಿನ ಖಂಡ 3(iii)ರಲ್ಲಿ ನಮೂದಿಸಿದ, ಪ್ರತಿಯೊಬ್ಬ ಮುಕ್ತ ಮಾರುಕಟ್ಟೆ ವಿದ್ಯುತ್ ಗ್ರಾಹಕನು, ಯಾವುದೇ ಹಣಕಾಸು ವರ್ಷಾವಧಿಯಲ್ಲಿ ಮುಕ್ತ ಮಾರುಕಟ್ಟೆ ಮೂಲಗಳಿಂದ ಖರೀದಿಸಿದ ವಿದ್ಯುತ್ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಿದ ಶೇಕಡಾವಾರು ಪ್ರಮಾಣದಂತೆ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ತನ್ನು ಖರೀದಿಸತಕ್ಕದ್ದು:
<table>
<tr><th>ಮೂಲ</th><th>2015 – 16</th><th>2016 – 17</th><th>2017 – 18</th><th>2018 – 19</th><th>2019 – 20 ಮತ್ತು ನಂತರ</th></tr>
<tr><td>ಸೌರಶಕ್ತಿ ಅಲ್ಲದ ಮೂಲಗಳಿಂದ</td><td>5.0%</td><td>5.5%</td><td>6%</td><td>7.0%</td><td>8%</td></tr>
<tr><td>ಸೌರಶಕ್ತಿ ಮೂಲದಿಂದ</td><td>0%</td><td>0.75%</td><td>1.25%</td><td>1.75%</td><td>2.50%</td></tr>
</table>
ಪರಂತು, ಗ್ರಾಹಕನ ಉದ್ಯಮವು ಒಂದೇ ಕಾನೂನುಸಮ್ಮತ ಸಂಸ್ಥೆಯಾಗಿದ್ದು, ಅದು ಕರ್ನಾಟಕ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಘಟಕಗಳನ್ನು ಹೊಂದಿದ್ದರೆ, ಕರ್ನಾಟಕ ರಾಜ್ಯದೊಳಗಿನ ಎಲ್ಲ ಅಂಥ ಘಟಕಗಳ ಸಂಯೋಜಿತ ಆರ್.ಪಿ.ಓವನ್ನು ಮೇಲೆ ನಿರ್ದಿಷ್ಟಪಡಿಸಿದ ಆರ್.ಪಿ.ಓವನ್ನು ಪಾಲಿಸುವ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.</td></tr>
<tr><td>8(1)</td><td>ಮೇಲಿನ ನಿಯಮ 3ರಲ್ಲಿ ಸೂಚಿಸಲ್ಪಟ್ಟಿರುವ ವಿತರಣ ಲೈಸೆನ್ಸುದಾರ ಅಥವಾ ಯಾವುದೇ ಇತರ ಗ್ರಾಹಕರು, ಈ ನಿಯಮಗಳಲ್ಲಿ ತಿಳಿಸಿರುವಂತೆ, ಯಾವುದೇ ಒಂದು ವರ್ಷದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಖರೀದಿ ನಿಯಮಾವಳಿಗಳ ಪ್ರಕಾರ ಆರ್.ಪಿ.ಓ ಅನ್ನು ಪಾಲಿಸುವಲ್ಲಿ ವಿಫಲರಾದರೆ, ಅಂತಹ ವಿತರಣಾ ಲೈಸೆನ್ಸುದಾರ ಅಥವಾ ಗ್ರಾಹಕರು ಆಯೋಗವು ನಿಗದಿಪಡಿಸುವ ಮೊಬಲಗನ್ನು ಠೇವಣಿಯ ರೂಪದಲ್ಲಿ ಪ್ರತ್ಯೇಕ ನಿಧಿಯ ಲೆಕ್ಕಕ್ಕೆ ಪಾವತಿಸಿ ಆಯೋಗದ ಆದೇಶದಂತೆ ಸೃಷ್ಟಿಸಿ ನಿರ್ವಹಿಸತಕ್ಕದ್ದು.</td><td>ಮೇಲಿನ ಖಂಡ 3ರಲ್ಲಿ ನಮೂದಿಸಲ್ಪಟ್ಟಿರುವ ವಿತರಣಾ ಲೈಸೆನ್ಸುದಾರನು ಅಥವಾ ಯಾವುದೇ ಇತರ ಗ್ರಾಹಕನು, ಯಾವುದೇ ಹಣಕಾಸು ವರ್ಷಕ್ಕೆ ಈ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಬಾಧ್ಯತೆಯನ್ನು ತಕ್ಷಣ ಮುಂಬರುವ ಹಣಕಾಸು ವರ್ಷದ 31ನೇ ಮೇ ದಿನಾಂಕದಂದು ಅಥವಾ ಅದಕ್ಕೂ ಮೊದಲು ಪಾಲಿಸತಕ್ಕದ್ದು.<br><br>ಪರಂತು, ಮೇಲಿನ ಖಂಡ 3ರಲ್ಲಿ ನಮೂದಿಸಿದ ವಿತರಣಾ ಲೈಸೆನ್ಸುದಾರನು ಅಥವಾ ಇತರ ಗ್ರಾಹಕನು, ಮೇಲೆ ನಿರ್ದಿಷ್ಟಪಡಿಸಿದ ಕಾಲದೊಳಗೆ ಯಾವುದೇ</td></tr>
</table>

| | | |
|---|---|---|
| | | ಹಣಕಾಸು ವರ್ಷದಲ್ಲಿ, ಆರ್.ಪಿ.ಓಅನ್ನು ಅಥವಾ ಅದರ ಯಾವುದೇ ಭಾಗವನ್ನು ಪಾಲಿಸಲು ವಿಫಲನಾದಲ್ಲಿ, ತಕ್ಷಣ ಮುಂಬರುವ ಹಣಕಾಸು ವರ್ಷದ 30ನೇ ಜೂನ್ ಒಳಗಾಗಿ ಆರ್.ಪಿ.ಓಅನ್ನು ಪಾಲಿಸುವಲ್ಲಿ ಉಂಟಾದ ಕೊರತೆಯ ಪ್ರಮಾಣದ ಶೇಕಡ 110ರಷ್ಟರಮಟ್ಟಿಗಿನ ಆರ್‌ಇಸಿಗಳನ್ನು ಖರೀದಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಆತನು ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 142ರ ಅಡಿಯಲ್ಲಿ ಕ್ರಮಕ್ಕೆ ಗುರಿಯಾಗತಕ್ಕದ್ದು.<br>ಮತ್ತೂ ಪರಂತು, ವಿತರಣಾ ಲೈಸೆನ್ಸುದಾರನು, ಯಾವುದೇ ವರ್ಷಕ್ಕಾಗಿ, ತಾತ್ಕಾಲಿಕ ದತ್ತಾಂಶವನ್ನಾಧರಿಸಿ, ಮೇಲೆ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ನಿರ್ದಿಷ್ಟಪಡಿಸಿದ ಆರ್.ಪಿ.ಓ ಪಾಲಿಸಲು ಆರ್‌ಇಸಿಯನ್ನು ಖರೀದಿಸಿದ್ದು, ಲೆಕ್ಕವನ್ನು ಅಂತಿಮಗೊಳಿಸಿದ ನಂತರ, ಹಾಗೆ ಖರೀದಿಸಿದ ಆರ್‌ಇಸಿಗಳು ನಿರ್ದಿಷ್ಟಪಡಿಸಿದ ಆರ್.ಪಿ.ಓಗಿಂತ ಹೆಚ್ಚಾಗಿದ್ದರೆ, ಹಾಗೆ ಖರೀದಿಸಿದ್ದ ಅಂಥ ಹೆಚ್ಚಿನ ಆರ್‌ಇಸಿಗಳನ್ನು ಮುಂಬರುವ ವರ್ಷದ ಆರ್‌ಪಿಓ ಪಾಲಿಸುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳಲು ಅನುಮತಿಯಿರತಕ್ಕದ್ದು.<br>ಮತ್ತೂ ಪರಂತು, ಮಾನ್ಯ ಮಾಡಿದ ನಂತರ ಆರ್‌ಪಿಓ ಪಾಲನೆ ಕುರಿತ ತ್ರೈಮಾಸಿಕ ದತ್ತಾಂಶವನ್ನು ನೋಡಲ್ ಏಜನ್ಸಿಯ ಜಾಲತಾಣದಲ್ಲಿ (ವೆಬ್‌ಸೈಟ್) ಪ್ರಕಟಿಸತಕ್ಕದ್ದು. |
| 8(2) | ವಿತರಣಾ ಲೈಸೆನ್ಸುದಾರರು ಅಥವಾ ಇತರ ಗ್ರಾಹಕರು ಕಾಲಕಾಲಕ್ಕೆ ಆಯೋಗದ ಪೂರ್ವಾನುಮತಿ ಪಡೆದು, ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಬೆಂಬಲಿಸಲು ಅಥವಾ ವಿದ್ಯುತ್ ಉಳಿತಾಯ ಕ್ರಮಗಳಿಗಾಗಿ ಹಾಗೆ ವಸೂಲಾದ ಮೊಬಲಗನ್ನು ಉಪಯೋಗಿಸಿಕೊಳ್ಳತಕ್ಕದ್ದು. | ಬಿಟ್ಟುಬಿಡಲಾಗಿದೆ. |

ಆಯೋಗದ ಅನುಮೋದನೆಯ ಮೇರೆಗೆ

ಕಾರ್ಯದರ್ಶಿ,
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.